ಶ್ರೀ ಅರಜನಮೂರ್ತಿ (ನೆಲಮಂಗಲ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಮುಖ್ಯವಾಗಿ ಲೋಕೋಪಯೋಗಿ ಇಲಾಖೆಗೆ ಸೇರಿದ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಎಷ್ಟು ಮೇಲು ಸೇತುವೆ: ಮೋರಿಗಳು ದುಸ್ಥಿತಿಯಲ್ಲಿವೆ? ಅವುಗಳನ್ನು ವಾಹನ ಸಂಚಾರಕ್ಕೆ ಅನುಕೂಲವಾಗುವಂತೆ ಸರಿಪಡಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) 4 ಬೃಹತ್ ಸೇತುವೆಗಳು ಮತ್ತು 133 ಮೋರಿ (ಕಿರು ಸೇತುವೆಗಳು ಸೇರಿ)ಗಳು ದುಸ್ಥಿತಿಯಲ್ಲಿರುತ್ತವೆ.

4 ಬೃಹತ್ ಸೇತುವೆಗಳಲ್ಲಿ ಒಂದು ಸೇತುವೆಯ ಪರ್ಯಾಯವಾಗಿ ಹೊಸ ಸೇತುವೆಯನ್ನು ನಿರ್ಮಿಸಲಾಗಿದೆ. ಇನ್ನೊಂದು ಪರ್ಯಾಯ ಹೊಸ ಸೇತುವೆಯ ಕೆಲಸ ಪ್ರಗತಿಯಲ್ಲಿದೆ. ಉಳಿದೆರಡು ಸೇತುವೆಗಳ ವಿನ್ಯಾಸ ಮತ್ತು ಅಂದಾಜುಗಳನ್ನು ತಯಾರಿಸಲು ಸಲಹೆಗಾರರನ್ನು ನೇಮಿಸಲಾಗಿದೆ.

ಇನ್ನು 133 ಕಿರುಸೇತುವೆ ಮತ್ತು ಮೋರಿಗಳ ಪೈಕಿ 37 ಕಿರುಸೇತುವೆ: ಮೋರಿಗಳ ದುರಸ್ತಿಯ ಕಾಮಗಾರಿಗಳು ಪ್ರಗತಿಯಲ್ಲಿವೆ. ಉಳಿದ 96 ಕಿರುಸೇತುವೆ: ಮೋರಿಗಳ ದುರಸ್ತಿ ಕಾಮಗಾರಿಗಳ ಅಂದಾಜುಪಟ್ಟಿ ತಯಾರಿಸುವ ಹಂತದಲ್ಲಿದೆ.

ಈ ದುಸ್ಥಿತಿಯಲ್ಲಿರುವ ಸೇತುವೆ: ಮೋರಿಗಳ ಮೇಲಿನ ವಾಹನ ಸಂಚಾರಕ್ಕೆ ಸಧ್ಯಕ್ಕೆ ಪರ್ಯಾಯ ವ್ಯವಸ್ಥೆ ಮಾಡಲಾಗಿದೆ.

ರಸ್ತೆ ಅಭಿವೃದ್ಧಿ ಹಾಗೂ ಕಟ್ಟಡ ನಿರ್ಮಾಣ.

14(200)

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ?

ಅ) 1999-2000ನೇ ಸಾಲಿನ ಆಯವ್ಯಯದಲ್ಲಿ ರಸ್ತೆ ಅಭಿವೃದ್ಧಿ ಹಾಗೂ ಕಟ್ಟಡ ನಿರ್ಮಾಣಕ್ಕಾಗಿ ಒದಗಿಸಲಾದ ಹಣ ಎಷ್ಟು?

ಆ) ಈ ಬಗ್ಗೆ ದಿನಾಂಕ 21-12-99ರವರೆಗೆ ಬಿಡುಗಡೆ ಮಾಡಿರುವ ಹಾಗೂ

ಖರ್ಚು ಮಾಡಿರುವ ಹಣ ಎಷ್ಟು?

ಇ) ದಿನಾಂಕ 31-12-1999ಕ್ಕೆ ಬಾಕಿ ಇದ್ದ ಬಿಲ್‌ಗಳ ಮೊತ್ತವೆಷ್ಟು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) 1999-2000ನೇ ಸಾಲಿನ ಆಯವ್ಯಯದಲ್ಲಿ ರಸ್ತೆ ಅಭಿವೃದ್ಧಿಗಾಗಿ ರೂ 22.50 ಕೋಟಿಗಳನ್ನು ಮತ್ತು ಕಟ್ಟಡ ನಿರ್ಮಾಣಕ್ಕಾಗಿ ರೂ 54.72 ಕೋಟಿ ರೂಗಳನ್ನು ಯೋಜನೆ ಲೆಕ್ಕ ಶೀರ್ಷಿಕೆಯಡಿಯಲ್ಲಿ ಒದಗಿಸಲಾಗಿದೆ (ನಬಾರ್ಡ್ ಹೊರತುಪಡಿಸಿ)

ಆ) 31-12-99 ಅಂತ್ಯಕ್ಕೆ ಬಿಡುಗಡೆ ಮಾಡಿರುವ ಮೊತ್ತದ ಮತ್ತು ವೆಚ್ಚದ ವಿವರ ಈ ಕೆಳಕಾಣಿಸಿದಂತೆ ಇರುತ್ತದೆ.

ಶೀರ್ಷಿಕೆ	ಬಿಡುಗಡೆಯಾದ ಮೊತ್ತ (ರೂ.ಲಕ್ಷಗಳಲ್ಲಿ)	ವೆಚ್ಚವಾದ ಮೊತ್ತ (ರೂ.ಲಕ್ಷಗಳಲ್ಲಿ)
ರಸ್ತೆ ಮತ್ತು ಸೇತುವೆಗಳು (ಯೋಜನೇತರ ಮತ್ತು ನಬಾರ್ಡ್ ಹೊರತುಪಡಿಸಿ)	858.00	913.00
ಕಟ್ಟಡಗಳು (ಯೋಜನೆ)	2176.00	2187.58

ಇ) 31-12-99ಕ್ಕೆ ಬಾಕಿ ಇದ್ದ ಬಿಲ್‌ಗಳ ಮೊತ್ತ

ರಸ್ತೆ ಮತ್ತು ಸೇತುವೆಗಳು (ನಬಾರ್ಡ್ ಮತ್ತು ಯೋಜನೇತರ ಲೆಕ್ಕಶೀರ್ಷಿಕೆ ಹೊರತುಪಡಿಸಿ) ರೂ 563.78 ಲಕ್ಷಗಳು

ಕಟ್ಟಡಗಳು (ಯೋಜನೆ) ರೂ. 1048.50 ಲಕ್ಷಗಳು

ರಸ್ತೆಗಳ ಅಭಿವೃದ್ಧಿಗೆ ನಬಾರ್ಡ್ ನೆರವು.

15(202)

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ?